ಮಹಾಲಕ್ಷ್ಮೀಪುರಂನಿಂದ ವೈಟ್‌ಫೀಲ್ಡ್‌ಗೆ ನೇರ ಬಸ್ ಸೌಲಭ್ಯ

53(156); ಶ್ರೀ ಗೋಪಾಲಯ್ಯ ಕೆ.

ಅ) ಬೆಂಗಳೂರಿನ ಮಹಾಲಕ್ಷ್ಮೀಪುರಂನಿಂದ ರಾಜಾಜಿನಗರದ ಮಾರ್ಗವಾಗಿ ಹಲಸೂರು ಟಿನ್‌ಫ್ಯಾಕ್ಟರಿ, ವೈಟ್‌ಫೀಲ್ಡ್‌ಗೆ ನೇರ ಬಸ್ ಸೌಲಭ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಈ ಭಾಗದ ಜನತೆಗಾಗಿ ಮೇಲ್ಕಂಡ ಜಾಗಗಳಿಗೆ ಮಹಾಲಕ್ಷ್ಮೀಪುರಂನಿಂದ ಬಸ್ ಸೌಲಭ್ಯ ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು)

ಅ) **ಮತ್ತು ಆ)** ಮಹಾಲಕ್ಷ್ಮೀಪುರಂನಿಂದ ರಾಜಾಜಿನಗರ, ಕೆಂಪೇಗೌಡ ಬಸ್ ನಿಲ್ದಾಣ, ದೊಮ್ಮಲೂರು ಬಸ್ ನಿಲ್ದಾಣ, ಹೆಚ್‌ಎಎಲ್ ಹಾಗೂ ಮಾರತ್‌ಹಳ್ಳಿ ಮಾರ್ಗವಾಗಿ ಐಟಿಪಿಎಲ್ ಹಾಗೂ ಕಾಡುಗೋಡಿ ಬಸ್ ನಿಲ್ದಾಣಕ್ಕೆ ವೋಲ್ವೋ ಮಾರ್ಗಸಂಖ್ಯೆ ವಿ333z ನಲ್ಲಿ 6 ಅನುಸೂಚಿಗಳಲ್ಲಿ 23 ಏಕಮುಖ ಸುತ್ತುವಳಿಗಳೊಂದಿಗೆ ನೇರ ಸಾರಿಗೆ ಸೌಲಭ್ಯ ಕಲ್ಪಿಸಲಾಗಿರುತ್ತದೆ.

ಮಹಾಲಕ್ಷ್ಮೀಪುರಂನಿಂದ ಹಾಗೂ ಮಹಾಲಕ್ಷ್ಮೀಂಪುರಂ ಮಾರ್ಗವಾಗಿ ಕೆಂಪೇಗೌಡ ಬಸ್ ನಿಲ್ದಾಣಕ್ಕೆ 39 ಬಸ್ಸುಗಳಿಂದ 569 ಏಕಮುಖ ಸುತ್ತುವಳಿಗಳನ್ನು ಆಚರಣೆಗೊಳಿಸಲಾಗುತ್ತಿದ್ದು, ಸಾರ್ವಜನಿಕ ಪ್ರಯಾಣಿಕರು ಮಹಾಲಕ್ಷ್ಮೀಪುರಂನಿಂದ ಕೆಂಪೇಗೌಡ ಬಸ್ ನಿಲ್ದಾಣಕ್ಕೆ ಬಂದು ಅಲ್ಲಿಂದ ಬಸ್ಸು ಬದಲಾಯಿಸುವ ಮೂಲಕ ವೈಟ್‌ಫೀಲ್ಡ್‌ಗೆ ಪ್ರಯಾಣಿಸಬಹುದಾಗಿರುತ್ತದೆ.

ಮಹಾಲಕ್ಷ್ಮೀಪುರಂನಿಂದ ರಾಜಾಜಿನಗರ, ಹಲಸೂರು, ಟಿನ್ ಫ್ಯಾಕ್ಟರಿ, ವೈಟ್ ಫೀಲ್ಡ್‌ಗೆ ಸಂಚರಿಸಲು ಕೆಂಪೇಗೌಡ ಬಸ್ ನಿಲ್ದಾಣದಿಂದ ಸಂಪರ್ಕ ಸಾರಿಗೆಯನ್ನು ಕಲ್ಪಿಸಲಾಗಿದ್ದು, ಹಲಸೂರು, ಟಿನ್ ಫ್ಯಾಕ್ಟರಿ,

ಹೂಡಿ, ವೈಟ್‌ಫೀಲ್ಡ್ ಮಾರ್ಗವಾಗಿ ವಿವಿಧ ಪ್ರದೇಶಗಳಿಗೆ ಒಟ್ಟು 32 ಬಸ್ಸುಗಳಿಂದ 310 ಏಕ ಮುಖ ಸುತ್ತುವಳಿಗಳೊಂದಿಗೆ ಸಾರಿಗೆ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

ಶ್ರೀ ಗೋಪಾಲಯ್ಯ ಕೆ.:– ಮಾನ್ಯ ಅಧ್ಯಕ್ಷರೆ, ಉತ್ತರ ಕೊಟ್ಟಿದ್ದಾರೆ, ನನ್ನ ಕ್ಷೇತ್ರದ ಮೂರು ಭಾಗದಲ್ಲಿ ವಿಜಯವಾಣಿ ಪತ್ರಿಕೆ ಜನಸ್ಪಂದನ ಕಾರ್ಯಕ್ರಮವನ್ನು ನಡೆಸುವ ಸಂದರ್ಭದಲ್ಲಿ ಬಹಳಷ್ಟು ಮಹಾಲಕ್ಷ್ಮಿ ಲೇಔಟ್‌ನಿಂದ ವೈಟ್ ಫೀಲ್ಡ್‌ಗೆ ನೇರವಾಗಿ ಬಸ್ ಸಂಪರ್ಕ ಕಲ್ಪಿಸಿಕೊಡಬೇಕೆಂದು ಜನರು ಕೇಳಿಕೊಂಡಿದ್ದಾರೆ. ತಾವು ಇನ್ನು 4 ಬಸ್‌ಗಳನ್ನು ನೇರವಾಗಿ ಅಲ್ಲಿಗೆ ಹಾಕಿಕೊಡುವ ಕೆಲಸವನ್ನು ಮಾಡಿಕೊಡಬೇಕೆಂದು ಮಾನ್ಯ ಸಾರಿಗೆ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ರಾಮಲಿಂಗಾ ರೆಡ್ಡಿ:– ಮಾನ್ಯ ಅಧ್ಯಕ್ಷರೆ, ಮಹಾಲಕ್ಷ್ಮಿ ಲೇಔಟ್‌ನಿಂದ ಕೆಬಿಎಸ್‌ಗೆ 39 ಬಸ್‌ಗಳಿಂದ 569 ಟ್ರಿಪ್ಸ್ ಇವೆ ಮತ್ತು ಕೆಬಿಎಸ್‌ನಿಂದ ವೈಟ್ ಫೀಲ್ಡ್‌ಗೆ 32 ಬಸ್‌ಗಳಿಂದ 310 ಟ್ರಿಪ್ಸ್ ಇವೆ. ಹಾಗೂ 6 ವೋಲ್ವೊ ಬಸ್ 23 ಟ್ರಿಪ್ಸ್ ನೇರವಾಗಿ ಮಹಾಲಕ್ಷ್ಮಿ ಲೇಔಟ್‌ನಿಂದ ವೈಟ್ ಫೀಲ್ಡ್‌ಗೆ ಹೋಗುತ್ತದೆ, ಅವು ಕೂಡ ವಯಾ ಕೆಬಿಎಸ್ ಮೂಲಕ ಹೋಗುತ್ತವೆ. ಮಾನ್ಯ ಸದಸ್ಯರು ನೇರವಾಗಿ ಹೋಗುವುದಕ್ಕೆ ಸಲಹೆ ಕೊಡುತ್ತಿದ್ದಾರೆ, ನಾನು ಅವರು ಕುಳಿತು ಮಾತನಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಗೋಪಾಲಯ್ಯ ಕೆ.:– ಜೊತೆಗೆ ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಬೆಂಗಳೂರು ನಗರದ ಎಲ್ಲಾ ಶಾಸಕರ ಸಭೆಯನ್ನು ಕರೆದು ಬಿಎಂಟಿಸಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಲಿಂಗಾರೆಡ್ಡಿ:– ಮಾನ್ಯ ಅಧ್ಯಕ್ಷರೆ, ಸಭೆಯನ್ನು ಮುಂದಿನವಾರ ಕರೆಯುತ್ತೇನೆ.

ಗಂಗಾ ಕಲ್ಯಾಣ ಯೋಜನೆ ಕೊಳವೆ ಬಾವಿಗಳ ಮಂಜೂರಾತಿ

54(295); ಶ್ರೀ ನಾರಾಯಣಸ್ವಾಮಿ ಎಸ್.ಎನ್ (ಬಂಗಾರಪೇಟೆ)

ಅ) 2012–13, 2013–14ನೇ ಸಾಲಿನಲ್ಲಿ ಕೋಲಾರ ಜಿಲ್ಲೆಗೆ ಮಂಜೂರಾದ ವೈಯಕ್ತಿಕ ಗಂಗಾ ಕಲ್ಯಾಣ ಯೋಜನೆಯ ಕೊಳವೆ ಬಾವಿಗಳ ಸಂಖ್ಯೆ ಎಷ್ಟು; ಹಾಗೂ ನಿಗದಿಪಡಿಸಿದ ಅನುದಾನ ಎಷ್ಟು;

ಆ) ಎಷ್ಟು ಜನ ಫಲಾನುಭವಿಗಳಿಗೆ ಕೊಳವೆ ಬಾವಿ ಕೊರೆದು ಯಂತ್ರ ಅಳವಡಿಸಲಾಗಿದೆ.

ಇ) ಎಷ್ಟು ಮಂದಿ ಫಲಾನುಭವಿಗಳು ಇದರ ಪ್ರಯೋಜನ ಪಡೆದಿರುತ್ತಾರೆ.

ಈ) ಕಳೆದ ಎರಡು ವರ್ಷಗಳಿಂದ ಕೊಳವೆ ಬಾವಿ ಕೊರೆಯದಿರಲು ಕಾರಣವೇನು; ಇದಕ್ಕೆ ಕಾರಣ ಕರ್ತರಾದ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ಸಚಿವರು)

(ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಪರವಾಗಿ)

ಅ)

ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ

2012–13, ಮತ್ತು 2013–14ರ ಸಾಲಿನಲ್ಲಿ ಕೋಲಾರ ಜಿಲ್ಲೆಗೆ ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ಗಂಗಾ ಕಲ್ಯಾಣ ಯೋಜನೆಯಡಿ ಮಂಜೂರು ಮಾಡಿದ ವೈಯಕ್ತಿಕ ಕೊಳವೆ ಬಾವಿಗಳ ಸಂಖ್ಯೆ: 135 ನಿಗದಿಪಡಿಸಿದ ಅನುದಾನ ` 160.50 ಲಕ್ಷಗಳು.